and so no point of order. Only you are trying to create a vacuum. ಇಲ್ಲಿ ಪ್ರೊಸೀಡಿಂಗ್ಸ್, ಕಾಲ್ ಅಟೆನ್‌ಷನ್ ನೋಟೀಸಸ್ ಎಲ್ಲಾ ಕೊಟ್ಟಿದ್ದಾರೆ. ಆ ನಂತರ vacuum create ಮಾಡುವುದಕ್ಕೆ ಮಾನ್ಯ ಸದಸ್ಯರು ಪ್ರಯತ್ನ ಮಾಡುತ್ತಾ ಇದ್ದಾರೆ. That should not be allowed. If there is anything serious, that should be brought your notice, & there are enongh provisions. Let him come out. We can also prepare and come and say what best we can ಅದು ಬಿಟ್ಟು ಸುಮ್ಮನೆ ಹಾಗೆ ಮಾತನಾಡುವುದಾದರೆ, ನಮಗೂ ಹಲವಾರು ವಿಷಯ ಗಳನ್ನು ಎತ್ತುವುದಕ್ಕೆ ಇದೆ. ಅವಕಾಶ ಕೊಟ್ಟರೆ ನಾವು ಮಾತನಾಡಂತ್ತೇವೆ. ಅದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಕೂಡದು. ಮುಂದಿನ ಏನು ಸೂಚನೆ ಇದೆ....

(ಗೊಂದಲ)

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ. ಮಾನ್ಯ ಶ್ರೀನಿವಾಸ್‌ರವರು ಹೇಳತಕ್ಕಂಥದ್ದು ಬೇರೆ ಸಂದರ್ಭದಲ್ಲಿ ಇರಬಹುದು. ಆದರೆ ಇಲ್ಲಿ ಮಾನ್ಯ ಸದಸ್ಯರೊಬ್ಬರ ಬಗ್ಗೆ ಮಾತನಾಡಿದ್ದು ತಮ್ಮ ಕಡತದಲ್ಲಿ ಸೇರಿಹೋಗಿದೆ. ನಮಗೆ ಈ ವಿಷಯದ ಬಗ್ಗೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ಹೊರಗಡೆಗೆ ನಮ್ಮ ಮೇಲೆ ಅನುಮಾನ ಬರತಕ್ಕ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಯಾರಾದರೂ ಇದರ ಬಗ್ಗೆ ಮಾತನಾಡಿರಲಿ ನಮ್ಮ ಮೇಲೆ ಇರಬಹುದು ಅಥವಾ ಮಾನ್ಯ ಶ್ರೀನಿವಾಸ್ ಮೇಲೆ ಇರಬಹುದು. ಆದ್ದರಿಂದ ನಮಗೆ ಇರತಕ್ಕ ಅನುಮಾನವನ್ನು ದಯವಿಟ್ಟು...

ಅಧ್ಯಕ್ಷರು.—ನೀವು ಏನಾದರೂ ಮಾತನಾಡುವಾಗ ಪರವಾನಿಗಿ ತೆಗೆದುಕೊಳ್ಳಬೇಕು. ಅದನ್ನು ನನಗೆ ಬರೆದು ಕಳುಹಿಸಿ ನಾನು ಪರ್ಮಿಷನ್ ಇವೊತ್ತು ಕೊಡುತ್ತೇನೆ, ಅಥವಾ ನಾಳೆ ಕೊಡುತ್ತೇನೆ. ಆಮೇಲೆ ನೀವು ಮಾತನಾಡಬೇಕು.

ಶ್ರೀ ಸಿ. ಬೈರೇಗೌಡ.—ಈವೊತ್ತಿನ ನಮ್ಮ ಅನುಮಾನವನ್ನು ಬಗೆಹರಿಸಬೇಕೆಂದು ನಾನು ಹೇಳುತ್ತೇನೆ.

ಮುಖ್ಯಮಂತ್ರಿಗಳ ಹೇಳಿಕೆ.

ಮಹದೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಯ ಮೂರಾಟದ ವಿಷಯವನ್ನು ವಿಧಾನ ಮಂಡಲದ ಸಾರ್ವಜನಿಕಲುದ್ದಿವೆಗಳ ಸವಿತಿಗೆ ಒಪ್ಪಿಸುವ ಬಗ್ಗೆ

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತಾರೆ.

ಶ್ರೀ ಪುಲ್ಲಿಕಾರ್ಜುನ ಎಂ ಖರ್ಗೆ.—ಯಾವ ವಿಷಯದ ಬಗ್ಗೆ...

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಅಧ್ಯಕ್ಷರೇ, ಮೂರು ದಿನಗಳ ಹಿಂದ ಶುಕ್ರವಾರದ ದಿವಸ ಪ್ರಶ್ನೋತ್ತರ ಕಾಲದಲ್ಲಿ Industrial Co- operativ Development ಗೆ ಸಂಬಂಧಪಟ್ಟಂತೆ ಮಂತ್ರಿಗಳು ಒಂದು ವಿಚಾರವನ್ನು ಇಲ್ಲಿ ಹೇಳಿದರು. ಆ ಸಂದರ್ಭದಲ್ಲಿ ನಾನು ಇರಲಿಲ್ಲ. ಪತ್ರಿಕೆಗಳಲ್ಲಿ ಈ ವಿಷಯದ ಬಗ್ಗೆ ಯಾರಾದರೂ ಓದಿದರೆ ತಪ್ಪು ತಿಳುವಳಿಕೆ ಆಗತಕ್ಕಂಥ ಅವಕಾಶ ಇದೆ. ಒಂದು ದೊಡ್ಡ ಸಕ್ಕರೆ ಕಾರ್ಖಾನೆಯನ್ನು ಲಕ್ಷಾಂತರ ರೂಪಾಯಿಗೆ ಯಾರಿಗೋ ಕೊಟ್ಟಿದ್ದಾರೆ ಎಂದು ಹೇಳತಕ್ಕದ್ದು ಸರ್ಕಾರ ಅವ್ಯವಹಾರ ಮಾಡಿದೆ ಅಥವಾ ಸರ್ಕಾರಕ್ಕೆ ಇದರಿಂದ ತಂಬ ನಷ್ಟವಾಗಿದೆ ಎಂದು ಹೇಳತಕ್ಕ ರೀತಿಯಲ್ಲಿ ವರದಿಯಾಗಿದೆ, ಈ ವಿಚಾರ ಜನರ ಮನಸ್ಸಿನಲ್ಲಿ ಸಂದೇಹವನ್ನು ಉಂಟು ಮಾಡತಕ್ಕ ಸಾಧ್ಯತೆ ಇರುವುದರಿಂದ, ಇದರಲ್ಲಿ ಏನಾದರೂ ಅವ್ಯವಹಾರ ನಡೆದಿರತಕ್ಕಂಥಹ ಕಾಲದಲ್ಲಿ ಅಂದಿನ ಪರಿಸ್ಥಿತಿಯಲ್ಲಿ ಸರಕಾರ ಏನು ನಿರ್ಣಯ ತೆಗೆದುಕೊಂಡಿದ್ದಾರೆ ಅದು ತಪ್ಪೋ ಅಥವಾ ಇದರಲ್ಲಿ ಏನಾದರೂ ಭ್ರಷ್ಟಾಚಾರ ನಡೆದಿದೆಯೇ ಎಂಬ ಎಲ್ಲಾ ವಿಚಾರಗಳನ್ನು ತನಿಖೆಗೆ ಒಳಪಡಿಸತಕ್ಕದ್ದು ಆಗತ್ಯ.

ಅದು ಇಲ್ಲದಿದ್ದರೆ ಇದು ಮಾತಿನಿಂದ ಮಾತಿಗೆ ಹೋಗಿ ಎಲ್ಲ ಕಡೆಗೂ ಹಬ್ಬಿದರೆ. ಇದರಲ್ಲಿ ಏನೋ ಒಂದು ಘೋರವಾದ ಅನ್ಯಾಯವಾಗಿದೆ ಎಂದು ಜನರು ಮನಸ್ಸಿನಲ್ಲಿ ಬರಬಹುದು. ಆದ್ದರಿಂದ ನಾನು ಇಲ್ಲಿ ಒಂದು ಸೂಚನೆ ಮಾಡುತ್ತೇನೆ ಏನೆಂದರೆ ಈ ಮನೆಗೆ ಸೇರಿದ ಪಿ.ಯು.ಸಿ ಕಮಿಟಿ ಏನಿದೆ, ಕಮಿಟಿಯವರು ತಕ್ಷಣವೇ ಅಂದರೆ ಈ ಅಧಿವೇಶನ ಮುಗಿದ ಕೂಡಲೇ ಇದನ್ನು ಕೂಲಂಕುಷವಾಗಿ ತನಿಖೆ ಮಾಡಿ ಈ ಮನೆಗೆ ಒಂದು ವರದಿಯನ್ನು ಒಪ್ಪಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ಆ ಕಮಿಟಿಯ ಮುಂದೆ ಹೋಗಲಿ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಇಲ್ಲಿ ತಿಳಿಸಬೇಕಾಗಿರುವುದರಿಂದ, ತಾವು ಅರ್ಧ ಗಂಟೆ ಕಾಲದ ಚರ್ಚೆಗೆ ಅವಕಾಶ ಮಾಡಿಕೊಡುವುದು ಒಳ್ಳೆಯದು.

ಅಧ್ಯಕ್ಷರು.—ಪಿ. ಯು. ಸಿ. ನವರು ಇದರ ಬಗ್ಗೆ ವಿಚಾರ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದರ ಬಗ್ಗೆ ಇಲ್ಲಿ ಕೆಲವು ವಿಚಾರಗಳನ್ನು ಬಹಿರಂಗಪಡಿಸ ಬೇಕಾಗಿದೆ. ಆದ್ದರಿಂದ ಇದರ ಬಗ್ಗೆ ಇಲ್ಲಿ ಅರ್ಧ ಗಂಟೆ ಕಾಲದ ಚರ್ಚೆ ಆಗುವುದು ಒಳ್ಳೆಯದು.

ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ. ಮೂರು ನಾಲ್ಕು ವಿಷಯಗಳಿಗೆ ಸಂಬಂಧ ಅರ್ಧ ಗಂಟೆ ಕಾಲದ ಚರ್ಚೆ ಆಗಬೇಕಾಗಿದೆ ಎಂದು ಮಾನ್ಯ ಸದಸ್ಯರುಗಳು ನನಗೆ ನೋಟೀಸ್ ಕೊಟ್ಟಿದ್ದಾರೆ. ನಾಳೆ ಬ್ಯಾಲೆಟ್ ಮಾಡಿದಾಗ ಇದು ತೀರ್ಮಾನವಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಮೊನ್ನೆದಿವಸ ಈ ವಿಚಾರ ಇಲ್ಲಿ ಪ್ರಸ್ತಾಪ ವಾಗುತ್ತಿದ್ದ ಸಮಯದಲ್ಲಿ ನಾನು ಉತ್ತರ ಕೊಡಲು ಎದ್ದು ನಿಂತಾಗ ನನಗೆ ಮಾನ್ಯ ಖಾರ್ಗೆ ಅವರು ಅವಕಾಶ ಕೊಡದ ಕಾರಣ ನಾನು ಸುಮ್ಮನಾದೆ. ನಂತರ ಶ್ರೀ ದೇವೆ ಗೌಡರು ಮಧ್ಯ ಪ್ರವೇಶ ಮಾಡಿದರು ವಾರನೆದಿವಸದ ಪತ್ರಿಕೆಯಲ್ಲಿ ಮಾನ್ಯ ಜಾಲಪ್ಪನವರು ಗೃಹಮಂತ್ರಿಗಳಾದ ಮೇಲೆ ಅವರ ನಾಲಿಗೆ ಸಡಿಲವಾಗಿದೆ ಎಂದು ಮಾನ್ಯ ಖಾರ್ಗೆ ಅವರು ಹೇಳಿದರೆಂದು ವರದಿ ಆಗಿದೆ. ನಾನು ಈ ಮಾತನ್ನು ಆ ದಿನ ಕೇಳಿಸಿಕೊಳ್ಳಲಿಲ್ಲ. ಮಾನ್ಯ ಖಾರ್ಗೆ ಅವರ ಬಾಯಿಂದ ನನ್ನ ಬಗ್ಗೆ ಇಂತಹ ಮಾತು ಬರ ಬಾರದಾಗಿತ್ತು. ಈ ಮಾತಿಗೆ ಉತ್ತರವಾಗಿ ನಾನು ನನ್ನ ಭಾಷೆಯ ಮಾತನ್ನು ಇಲ್ಲಿ ಉಪಯೋಗಿಸ ಬಹುದು. ಆದರೆ ಮಾನ್ಯ ಖಾರ್ಗೆ ಅವರಿಗೆ ಇಂತಹ ಪದಗಳನ್ನು ಉಪಯೋಗಿಸುವುದರಿಂದ ಸಂತೋಷ ವಾಗುವುದಾದರೆ ಅವರು ಉಪಯೋಗ ಮಾಡಿಕೊಳ್ಳಲಿ.

ಗಮನ ಸೆಳೆಯುವ ಸೂಚನೆಗಳು

ಅಧ್ಯಕ್ಷರು.—ಇಲ್ಲಿ ಮೊದಲನೆಯ ಮತ್ತು ಎರಡನೆಯ ಗಮನ ಸೆಳೆಯುವ ಸೂಚನೆಗಳಿಗೆ ಸಂಬಂಧಪಟ್ಟಂತೆ ಮಾನ್ಯ ಸಚಿವರುಗಳ ಗಮನ ಸೆಳೆಯಲು ಸಂಬಂಧಪಟ್ಟ ಸದಸ್ಯರುಗಳು ಸಭೆಯಲ್ಲಿ ಹಾಜರಿಲ್ಲದ ಪ್ರಯುಕ್ತ ಮೂರನೇ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಗ್ರಾಮಾಣಾಭಿವೃದ್ಧಿ ಸಚಿವರು ಮೇಲ್ಮನೆಯಲ್ಲಿರುವ ಪ್ರಯುಕ್ತ ನಂತರ ಇದನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಗಬಹುದು. ಈಗ ಮಾನ್ಯ ಯಡಿಯೂರಪ್ಪನವರು ತಮ್ಮ ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಕೃಷಿ ಮಂತ್ರಿಗಳ ಗಮನ ಸೆಳೆಯಬಹುದು,

1) ರೈತರಿಗೆ ಪರ್ಯಾಯ ಬೆಳೆ ಬೆಳೆಯುವ ಬೀಜ ಸಂಗ್ರಹಣೆಯ ಬಗ್ಗೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ರೈತರಿಗೆ ಅನುಕೂಲ ವಾಗುವಂತೆ ಪರ್ಯಾಯ ಬೆಳೆ ಬೆಳೆಯುವ ಬೀಜ ಸಂಗ್ರಹಿಸುವ ಬಗ್ಗೆ ನಾನು ಮಾನ್ಯ ಕೃಷಿ ಮಂತ್ರಿ ಯವರ ಗಮನವನ್ನು ಸೆಳೆಯುತ್ತೇನೆ.